ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ– 1

**<u>ದಿಃ 10.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ ಟಿ ಆರ್ ಎಸ್ ವಕೀಲರಿಂದಃ –</u>**

ನಿ ಪಿ 24 ರ ವಿಲ್ಲನ್ನು ನಿಮಗೆ ಯಾರು ಕೊಟ್ಟರು ಎಂದರೆ ಮಹಾದೇವಮ್ಮ ಮೃತ ಹೊಂದಿದ ನಂತರ ಮನೆಯಲ್ಲಿ ಸಿಕ್ಕಿರುತ್ತದೆ ಎನ್ನುತ್ತಾರೆ. ವಿಲ್ ಗೆ ಸಾಕ್ಷಿದಾರರು ಯಾರು ಎಂದರೆ ವೀರಣ್ಣ ಮತ್ತು ನಂಜಪ್ಪ ಎನ್ನುತ್ತಾರೆ. ನಂಜಪ್ಪ ನಿಮಗೆ ಏನಾಗಬೇಕು ಎಂದರೆ ತಂದೆ ಆಗಬೇಕು ಎನ್ನುತ್ತಾರೆ. ಓ ಎಸ್ ನಂಬರ 12/2009 ರ ದಾವೆಯಲ್ಲಿ ನಿ ಪಿ 24 ರ ವಿಲ್ ನಾಮೆಯನ್ನು ಹಾಜರುಪಡಿಸಿರುವುದಿಲ್ಲಾ ಎಂದರೆ ಸರಿ. ವಿಲ್ಲನ್ನು ನಂಜಪ್ಪ ಸಾಕ್ಷಿದಾರರಾದ ನಿಮ್ಮ ತಂದೆ ತಯಾರು ಮಾಡಿದ್ರಾ ಎಂದರೆ ಇಲ್ಲಾ. ಯಾರು ತಯಾರಿಸಿದ್ದು ಎಂದರೆ ಮಹಾದೇವಮ್ಮ ಎನ್ನುತ್ತಾರೆ. ನೀವೇನಾದರು ವಿಲ್ ತಯಾರು ಮಾಡುವಾಗ ಹೋಗಿದ್ರಾ ಎಂದರೆ ಇಲ್ಲಾ. ನಿ ಪಿ 24 ರಲ್ಲಿ ಕಿವಿ ಕೇಳುತ್ತಿರಲಿಲ್ಲ ಎಂದು ಬರೆಸಿರುತ್ತಾರೆಂದರೆ ಸರಿ. ನಿ ಪಿ 24 ರ ಪತ್ರ ಆದ 5–6 ತಿಂಗಳ ನಂತರ ಮೃತಪಟ್ಟಿರುತ್ತಾರೆ ಎನ್ನುತ್ತಾರೆ. ನಿ ಪಿ 24 ಆದ 5 ತಿಂಗಳ ಒಳಗೆ ಮಹಾದೇವಮ್ಮ ಮೃತ ಹೊಂದಿರುತ್ತಾರೆ ಎಂದು ಕೇಳಿದ್ದಕ್ಕೆ ಇರಬಹುದು ಎನ್ನುತ್ತಾರೆ. ನಿ ಪಿ 24 ರಲ್ಲಿ ಇರುವಂತಹ ಹೆಬ್ಬೆರಳಿನ ಗುರುತನ್ನು ಇದು ಮಹಾದೇವಮ್ಮನ ಹೆಬ್ಬೆಟ್ಟಿನ ಗುರುತು ಎಂದು ಯಾರು ಗುರುತಿಸಿದ್ದಾರೆ ಎಂದರೆ ವೀರಣ್ಣ ಮತ್ತು ನಂಜಪ್ಪ ಗುರುತಿಸಿದ್ದಾರೆ ಎನ್ನುತ್ತಾರೆ. ನಂಜಪ್ಪ ಬದುಕಿದ್ದಾರಾ ಎಂದರೆ ಮೃತ ಹೊಂದಿದ್ದಾರೆ. ವೀರಣ್ಣ ಬದುಕಿದ್ದಾರೆ ಎನ್ನುತ್ತಾರೆ. ವೀರಣ್ಣ ನೀವು ವಿಶ್ವಾಸಿಕರು ಎಂದರೆ ಸರಿಯಲ್ಲ ಪರಿಚಯದವರು ಎನ್ನುತ್ತಾರೆ. ನಿ ಪಿ 24 ವಿಲ್ಲನ್ನು ಈ ಕೇಸಿಗೋಸ್ಕರ ಸೃಷ್ಟಿಸಿದ್ದೀರಾ ಎಂದರೆ ಸರಿಯಲ್ಲ. ನಿ ಪಿ 24 ನ್ನು ಮಹಾದೇವಮ್ಮಳು ಸ್ವಇಚ್ಚೆ ಯಿಂದ ಮತ್ತು ಆರೋಗ ಸರಿಇದ್ದಾಗ ಬರೆದಂತಹ ವಿಲ್ಲ ನಾಮೆ ಆಗಿರುವುದಿಲ್ಲಾ ಮತ್ತು ಸದರಿ ವಿಲ್ಲನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ–

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಹರಪನಹಳ್ಳಿ.